## ಕವಿತೆ



ಎಂ.ಆರ್. ಕಮಲ

ಕಲೆ: ರಾಜೇಂದ್ರ ಕೇದಿಗೆ



# ಬಣ್ಣಗನಸೊಂದು ಹಾರಿ ಹೋಗಿದೆ

ಬಣ್ಣಗನಸೊಂದು ಹಾರಿ ಹೋಗಿದೆ
ದಯಮಾಡಿ ಹುಡುಕಿಕೊಡಿ

ಮಳೆಬಿಲ್ಲನೇರಿ ಕುಳಿತಿತೋ
ಕೊಳದಲ್ಲಿ ಹೂವರಳಿಸಿತೋ
ಚುಕ್ಕೆಗಳ ನಡುವೆ ಮಿನುಗಿತೋ
ಮಿಂಚು ಬಳ್ಳಿಯಲ್ಲಿ ಜೀಕಿತೋ!

ಬಣ್ಣಗನಸೊಂದು ಹಾರಿ ಹೋಗಿದೆ
ದಯಮಾಡಿ ಹುಡುಕಿಕೊಡಿ

ಬೆಂಕಿ ಹಚ್ಚುವವರ ನಡುವೆ ಬೆಂದಿತೋ
ಮಾತುಗಳ ವಿಷಮಳೆಗೆ ಸಿಲುಕಿತೋ
ರಂಗಿನ ಚಿತ್ರ ಕಲಸೇ ಹೋಯಿತೋ
ನಿಂತಲ್ಲೇ ನಿಂತು ಕೊಳೆಯಿತೋ

ಬಣ್ಣಗನಸೊಂದು ಹಾರಿ ಹೋಗಿದೆ
ದಯಮಾಡಿ ಹುಡುಕಬೇಡಿ